**ಕರ್ನಾಟಕ ಸರ್ಕಾರ,**
**ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು ಕೇಂದ್ರ ನಗರ ಪಾಲಿಕೆ**
**ಹಾಗೂ ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್**

---

ದಿನಾಂಕ: 21-10-2025

## -: ಸಂಕ್ಷಿಪ್ತ ವಿವರ :-

## ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ವೈಟ್ ಟಾಪಿಂಗ್ ಮತ್ತು ಸಮಗ್ರ ರಸ್ತೆ ಅಭಿವೃದ್ಧಿ ಕಾಮಗಾರಿಯ ಚಾಲನಾ ಕಾರ್ಯಕ್ರಮ

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ವತಿಯಿಂದ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಗಾಂಧಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಪೇಟೆ ರಸ್ತೆಯ ವೈಟ್ ಟಾಪಿಂಗ್ ಮತ್ತು ಸಮಗ್ರ ರಸ್ತೆ ಅಭಿವೃದ್ಧಿ ನಿರ್ಮಾಣ ಕಾಮಗಾರಿಯು ಘನ ಸರ್ಕಾರದ ಯೋಜನೆಯಡಿ ಅನುಮೋದನೆಯಾಗಿರುತ್ತದೆ.

- **ಉದ್ದೇಶಿತ ಯೋಜನೆಯ ಮಾದರಿ – ವೈಟ್ ಟಾಪಿಂಗ್ ರಸ್ತೆ**
- **ಯೋಜನೆಯ ಒಟ್ಟು ಅಂದಾಜು ಮೊತ್ತ – ರೂ. 58.44 ಕೋಟಿಗಳು**
- **ಕಾಮಗಾರಿಯ ಸ್ಥಳ – ಗಾಂಧಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಪೇಟೆ ಹಾಗೂ ರೇಸ್ ಕೋರ್ಸ್ ರಸ್ತೆ.**
- **ಸದರಿ ಯೋಜನೆಯಿಂದ ಪ್ರಯೋಜನಾ ಪಡೆಯುವ ಪ್ರದೇಶಗಳು – ಚಿಕ್ಕಪೇಟೆ, ಗಾಂಧಿನಗರ, ಅವೆನ್ಯೂ ರಸ್ತೆ, ಕಾಟನ್‌ಪೇಟೆ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.**
- **ಗಾಂಧಿನಗರ ಕ್ಲಸ್ಟರ್ ರಸ್ತೆಯ ಒಟ್ಟು ಉದ್ದ – 5.57 ಕಿ.ಮಿ.**
- **ಮಳೆ ನೀರು, ಒಳಚರಂಡಿ ಪೈಪ್ ಲೈನ್‌ಗಳು ರಸ್ತೆಯ ಮಧ್ಯಭಾಗದಲ್ಲಿ ಮತ್ತು ಯುಟಿಲಿಟಿಯು ರಸ್ತೆಯ ಎರಡು ಬದಿಗಳಲ್ಲಿ ಒಳಗೊಂಡಂತೆ 2.7 ಮೀ ಅಗಲದ ವೈಟ್ ಟಾಪಿಂಗ್ ರಸ್ತೆ ನಿರ್ಮಾಣ.**

ಗಾಂಧಿನಗರ ವಿಧಾನ ಸಭಾಕ್ಷೇತ್ರದ ಚಿಕ್ಕಪೇಟೆ ವ್ಯಾಪ್ತಿಯ ರಸ್ತೆಗಳು ನಗರದ ಕೇಂದ್ರ ಭಾಗದ ರಸ್ತೆಗಳಾಗಿದ್ದು, ಅತಿ ಹೆಚ್ಚು ವಾಹನ ದಟ್ಟಣೆ ಹಾಗೂ ಕೆಲವು ರಸ್ತೆಗಳು ಪೆಟ್ಟ (petta) ಪ್ರದೇಶದ ರಸ್ತೆಗಳಾಗಿದ್ದು ಅತ್ಯಂತ ಕಿರಿದಾದ ರಸ್ತೆಗಳಾಗಿದ್ದು ಹೆಚ್ಚು ಜನನಿಬಿಡ ರಸ್ತೆಗಳಾಗಿವೆ. ಗಾಂಧಿನಗರ ವಿಧಾನಸಭಾ ಕ್ಷೇತ್ರದ ಚಿಕ್ಕಪೇಟೆ ಪ್ರದೇಶವು ಬೆಂಗಳೂರು ಕೇಂದ್ರ ಭಾಗದಲ್ಲಿದ್ದು, ವ್ಯವಹಾರ ವಹಿವಾಟಿನಿಂದ ಕೂಡಿರುತ್ತದೆ. ಹಗಲಿನ ವೇಳೆಯಲ್ಲಿ ಭಾರಿ ಸಂಖ್ಯೆಯ ಜನ ಓಡಾಡುವುದರ ಜೊತೆಗೆ ಅಧಿಕ ವಾಹನ ಸಂಚಾರವಿರುತ್ತದೆ. ರಾತ್ರಿ ವೇಳೆಯಲ್ಲಿ ಕೂಡ ಸರಕು ವಾಹನಗಳ ಓಡಾಟ ಸಂಖ್ಯೆ ಜಾಸ್ತಿ ಇರುತ್ತದೆ. ಈ ಪ್ರದೇಶಕ್ಕೆ ಹೊಂದಿಕೊಂಡಂತೆ ಬೆಂಗಳೂರು ನಗರದ ರೈಲು ನಿಲ್ದಾಣ, ಬಸ್ ನಿಲ್ದಾಣ ಹಾಗೂ ಮೆಟ್ರೋ ನಿಲ್ದಾಣಗಳಿರುವುದರಿಂದ ಈ ಪ್ರದೇಶಕ್ಕೆ ಬಂದು ಹೋಗುವ ಹಾಗೂ ಈ ಪ್ರದೇಶದಿಂದ ಹಾದು ಹೋಗುವ ವಾಹನಗಳ ಸಂಖ್ಯೆ ಅಧಿಕವಾಗಿರುವುದರಿಂದ ಸಮಗ್ರವಾಗಿ ರಸ್ತೆಯನ್ನು ವೈಟ್ ಟಾಪಿಂಗ್ ಮತ್ತು ಸಮಗ್ರ ರಸ್ತೆ ಅಭಿವೃದ್ಧಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ.

ಸದರಿ ಯೋಜನೆಯು ವಾಹನಗಳ ದಟ್ಟಣೆಯನ್ನು ನಿಯಂತ್ರಿಸಲು ಹಾಗೂ ಸಂಚಾರಿ ವ್ಯವಸ್ಥೆಯನ್ನು ಸುಗಮಗೊಳಿಸಲು ಉದ್ದೇಶಿಸಲಾಗಿರುತ್ತದೆ. ಪ್ರಾಸ್ತಾಪಿತ ಯೋಜನೆಯಲ್ಲಿ ಟ್ರಾಫಿಕ್ ನಿಯಮಾವಳಿಗಳನ್ನು ವ್ಯವಸ್ಥಿತ ರೀತಿಯಲ್ಲಿ ಅಳವಡಿಸಲಾಗಿದ್ದು, ಇದರಿಂದ ವಾಹನ ಸಂಚಾರವನ್ನು ಸುಗಮಗೊಳಿಸಬಹುದಾಗಿದೆ.

**ವೈಟ್ ಟಾಂಪಿಂಗ್ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವ ರಸ್ತೆಗಳ ವಿವರ :-**

| ಕ್ರ.ಸಂ | ರಸ್ತೆಗಳ ಹೆಸರು | ರಸ್ತೆಗಳ ಉದ್ದ ಕಿ.ಮೀ. |
|---|---|---|
| **1** | ಬಿಟಿ ರಸ್ತೆ | **0.385** |
| **2** | ರಂಗಸ್ವಾಮಿ ದೇವಸ್ಥಾನದ ರಸ್ತೆ | **0.645** |
| **3** | ಸುಲ್ತಾನ್ ಪೇಟೆ ಮುಖ್ಯ ರಸ್ತೆ | **0.695** |
| **4** | ಕಿಲಾರಿ ರಸ್ತೆ | **0.611** |
| **5** | ಆಸ್ಪತ್ರೆ ರಸ್ತೆ | **1.537** |
| **6** | ಧನವಂತ್ರಿ ರಸ್ತೆಯಿಂದ ಗುಬ್ಬಿ ತೋಟದಪ್ಪ ರಸ್ತೆ ವರೆಗಿನ ಬಿವಿಂಟಿಸಿ ರಸ್ತೆ | **0.324** |
| **7** | ಟ್ಯಾಂಕ್ ಬಂಡ್ ರಸ್ತೆ | **0.435** |
| **8** | ಮೌರ್ಯ ಜಂಕ್ಷನ್ ನಿಂದ ಹರೇ ಕೃಷ್ಣ ಜಂಕ್ಷನ್ ವರೆಗಿನ ರೇಸ್ ಕೋರ್ಸ್ ರಸ್ತೆ | **0.940** |
| | ಒಟ್ಟು | **5.572** |

**ವೈಟ್ ಟಾಂಪಿಂಗ್ ರಸ್ತೆ ಉಪಯುಕ್ತತೆಗಳು :-**

- **ರಸ್ತೆಯ ಎರಡು ಬದಿಯಲ್ಲೂ ಪವರ್ ಡಕ್ಟ್, ಓಎಫ್‌ಸಿ ಡಕ್ಟ್, ನೀರು ಸರಬರಾಜು ಹಾಗೂ ಒಳಚರಂಡಿ ಪೈಪ್‌ಗಳ ವ್ಯವಸ್ಥೆ**
- **ಮಳೆ ನೀರು ಸರಾಗವಾಗಿ ಹರಿಯಲು ವ್ಯವಸ್ಥೆ**
- **ಅವಶ್ಯಕತೆ ಮತ್ತು ಸ್ಥಳಾವಕಾಶದ ಲಭ್ಯತೆಗೆ ಅನುಗುಣವಾಗಿ ಪಾರ್ಕಿಂಗ್ ಬೇ ನಿರ್ಮಾಣ.**

*************